# ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 158 ಟಿಎನ್‌ಆರ್ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ 08.05.2020

## ಆದೇಶ

ಕೇಂದ್ರ ಗೃಹ ಮಂತ್ರಾಲಯವು ಆದೇಶ ಸಂಖ್ಯೆ40-3/2020-ಡಿಎಂ-ಐ (ಎ), ದಿ.01.05.2020 ರಲ್ಲಿ ಲಾಕ್‌ಡೌನ್ ಅವಧಿಯನ್ನು ದಿ.04.05.2020 ರಿಂದ ಜಾರಿಗೆ ಬರುವಂತೆ ಇನ್ನೂ ಎರಡು ವಾರಗಳವರೆಗೆ ವಿಸ್ತರಿಸಿದೆ ಮತ್ತು ಲಾಕ್‌ಡೌನ್ ಕ್ರಮಗಳ ಕುರಿತು ಹೊಸ ಮಾರ್ಗಸೂಚಿಗಳನ್ನು ಸಹ ಜಾರಿಗೊಳಿಸಿದ್ದು, ಇವು ದಿ. 04.05.2020 ರಿಂದ ಎರಡು ವಾರಗಳ ಅವಧಿಯವರಿಗೆ ಜಾರಿಯಲ್ಲಿರುತ್ತವೆ.

ಆದಾಗ್ಯೂ ಕರ್ನಾಟಕ ರಾಜ್ಯವು ಆದೇಶ ಸಂ.ಕಂಇ 158 ಟಿಎನ್‌ಆರ್ 2020, ದಿ. 02.05.2020 ರಲ್ಲಿ ಹೊಸ ಮಾರ್ಗಸೂಚಿಗಳನ್ನು ಹೊರಡಿಸಿದೆ ಮತ್ತು ಇವು ದಿ. 04.05.2020 ರಿಂದ 2 ವಾರಗಳ ಅವಧಿಗೆ ಜಾರಿಯಲ್ಲಿರುತ್ತವೆ.

ಸರ್ಕಾರದ ಆದೇಶ ದಿ.02-05-2020ರ ಸಂಖ್ಯೆ ಕಂಇ 158 ಟಿಎನ್‌ಆರ್ 2020ನ್ನು ಮುಂದುವರೆಸುತ್ತಾ, ವಿಪತ್ತು ನಿರ್ವಹಣಾ ಕಾಯ್ದೆ, 2005ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ರಾಜ್ಯ ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾಗಿ, ಈ ಕೆಳಗೆ ಸಹಿ ಮಾಡಲಾದ ನಾನು, ಕಂಟೈನ್‌ಮೆಂಟ್ ವಲಯಗಳ ಹೊರಗಿನ ಕೆಂಪು ವಲಯ ಜಿಲ್ಲೆಗಳಲ್ಲಿ "ಮಾನ್ಯತೆ ಪಡೆದ ಐಇಸಿ ಕೋಡ್‌ನೊಂದಿಗೆ ರಫ್ತು ಬದ್ಧತೆಗಳನ್ನು ಹೊಂದಿರುವ ಮತ್ತು ಉಡುಪು ರಫ್ತು ಪ್ರಚಾರ ಮಂಡಳಿಯಲ್ಲಿ (ಎಇಪಿಸಿ) ನೋಂದಾಯಿಸಲಾದ ಉಡುಪು ಘಟಕಗಳು"ಒಟ್ಟು ಕಾರ್ಮಿಕರ ಸಂಖ್ಯೆಯ 1/3 ಭಾಗದಷ್ಟು ಕಾರ್ಮಿಕರೊಂದಿಗೆ ನಿಗದಿತ ಎಸ್‌ಒಪಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಷರತ್ತಿಗೊಳಪಟ್ಟು ಕಾರ್ಯನಿರ್ವಹಿಸಲು ಈ ಮೂಲಕ ಅನುಮತಿ ನೀಡಿ ಆದೇಶಿಸುತ್ತಿದ್ದೇನೆ.

(ಟಿ.ಎಂ.ವಿಜಯ ಭಾಸ್ಕರ್)
ಮುಖ್ಯ ಕಾರ್ಯದರ್ಶಿ ಹಾಗೂ
ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ
ಕಾರ್ಯಕಾರಿ ಸಮಿತಿ ಅಧ್ಯಕ್ಷರು

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು.